**ಓ. ಎಸ್. ನಂ. 45 / 2017** **ಪಿ ಡಬ್ಲ್ಯೂ – 1**

**ದಿನಾಂಕಃ 04.07.2022 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲು – 1 ರಿಂದ 4 ನೇ ಪ್ರತಿವಾದಿಗಳ ಪರ ಶ್ರೀ ಪಿ ಹೆಚ್ ಕೆ ವಕೀಲರಿಂದ</u>**

ನನ್ನ ತಾತ ಹುಚ್ಚೇಗೌಡನಿಗೆ ಒಟ್ಟು 7 ಜನ ಮಕ್ಕಳಿದ್ದು 5 ಗಂಡು 2 ಹೆಣ್ಣುಮಕ್ಕಳು. ಅವರ ಹೆಸರುಗಳು ಹುಚ್ಚಮ್ಮ, ಶಿವಣ್ಣ, ಮಹದೇವ, ಪುಟ್ಟಸ್ವಾಮಿ, ನಾಗರಾಜು, ಮಲ್ಲು ಆಗಿದ್ದು ಇನ್ನೊಬ್ಬರ ಹೆಸರು ನನಗೆ ಗೊತ್ತಿರುವುದಿಲ್ಲ. ನನ್ನ ತಾತ ಕೆಇಬಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ನನ್ನ ತಂದೆ ವ್ಯವಸಾಯ ಮಾಡುತ್ತಿದ್ದರು. ನನ್ನ ತಾತ ಹುಚ್ಚೇಗೌಡರಿಗೆ ಆಸ್ತಿಗಳಿರಲಿಲ್ಲ. ಸರ್ವೆ ನಂ. 680/1 ವಿಸ್ತೀಣರ್ 4 ಎಕರೆ 38 ಸೆಂಟ್ಸ್ ಯಾವ ರೀತಿ ಬಂದಿರುತ್ತದೆ ಎಂದು ಗೊತ್ತಿರುವುದಿಲ್ಲ. ಸದರಿ ಆಸ್ತಿಯು ಸಹ ನಮ್ಮ ಒಟ್ಟು ಕುಟುಂಬದ ಆಸ್ತಿಯಲ್ಲ ಎಂದರೆ ಸರಿಯಲ್ಲ. ನನ್ನ ಜನ್ಮ ದಿನಾಂಕಃ 07.05.1976 ಆಗಿರುತ್ತದೆ. ನಾನು ಬಾಳೆಕಾಯಿ ಮಂಡಿಯಲ್ಲಿ ಕೆಲಸ ಮಾಡುತ್ತೇನೆ.

**<u>ಪ್ರತಿವಾದಿಗಳ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಓ

(ಆನಂದ ಎಂ.)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.